Akashvani : Bangalore
Regional Bulletin In Kannada
26.11.2026 / 19.35 hrs
ಆಕಾಶವಾಣಿ ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ಭಾರತೀಯ ನ್ಯಾಯಾಂಗದಿಂದ ನ್ಯಾಯದ ಮೂಲಭೂತ ಆದರ್ಶಗಳು ಸಶಕ್ತ - ರಾಷ್ಟ್ರಪತಿ ದ್ರೌಪದಿ ಮುರ್ಮು
- ಭಾರತ, ಜಾಗತಿಕ ಮಟ್ಟದ ಪ್ರಮುಖ ಶಕ್ತಿಯಾಗಲು ತಾಂತ್ರಿಕವಾಗಿ ಮುಂದುವರೆದ ರಾಷ್ಟ್ರೀಯ ಭದ್ರತಾ ವ್ಯವಸ್ಥೆ ಅಗತ್ಯ - ರಕ್ಷಣಾ ಸಚಿವ ರಾಜನಾಥ್ ಸಿಂಗ್
- ಸಂವಿಧಾನ, ದೇಶದ ಆಶೋತ್ತರ, ಆಕಾಂಕ್ಷೆ, ಮೌಲ್ಯಗಳ ಪ್ರತಿರೂಪ- ಕೇಂದ್ರ ಗೃಹ ಸಚಿವ ಅಮಿತ್ ಶಾ
- ೨೦೨೫-೨೬ನೇ ಸಾಲಿನಲ್ಲಿ ದೇಶದಲ್ಲಿ ೩೭೮ ದಶಲಕ್ಷ ಟನ್ ಆಹಾರ ಧಾನ್ಯ ಉತ್ಪಾದನೆ - ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್
- ಏಷ್ಯಾಕಪ್ ರೈಸಿಂಗ್ ಸ್ಟಾರ್ಸ್ ಕ್ರಿಕೆಟ್: ಶ್ರೀಲಂಕಾಗೆ ಗೆಲ್ಲಲು ೩೧೮ ರನ್‌ಗಳ ಗುರಿ ಒಡ್ಡಿದ ಭಾರತ ಎ ತಂಡ

ಭಾರತೀಯ ನ್ಯಾಯಾಂಗವು ಬದಲಾಗುತ್ತಿರುವ ಸನ್ನಿವೇಶಗಳು ಮತ್ತು ನಿರೀಕ್ಷೆಗಳಿಗೆ ಅನುಗುಣವಾಗಿ ಹೊಂದಿಕೊಂಡು ನ್ಯಾಯದ ಮೂಲಭೂತ ಆದರ್ಶಗಳನ್ನು ಎತ್ತಿಹಿಡಿಯುವುದು ಮತ್ತು ಬಲಪಡಿಸುವುದನ್ನು ಮುಂದುವರಿಸಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ.

ದೆಹಲಿಯಲ್ಲಿಂದು ಸುಪ್ರೀಂ ಕೋರ್ಟ್ ಆಯೋಜಿಸಿದ್ದ ಸಂವಿಧಾನ ದಿನದ ಆಚರಣೆಗಳಲ್ಲಿ ಪಾಲ್ಗೊಂಡು ಮಾತನಾಡಿದ ರಾಷ್ಟ್ರಪತಿ ಮುರ್ಮು, ಕಳೆದ ಏಳು-ಎಂಟು ದಶಕಗಳಲ್ಲಿ ಜೀವನದ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಬದಲಾವಣೆಗಳಾಗಿವೆ. ವಿಶೇಷವಾಗಿ ತಂತ್ರಜ್ಞಾನ ಮತ್ತು ಮಾಧ್ಯಮಗಳ ಪ್ರಭಾವ ನಿರಂತರವಾಗಿ ಬೆಳೆಯುತ್ತಿದ್ದು, ಹೆಚ್ಚು ವ್ಯಾಪಕ ಮತ್ತು ಆಳವಾದ ಪರಿಣಾಮವನ್ನು ಬೀರುತ್ತಿದೆ. ಭಾರತೀಯ ನ್ಯಾಯಾಂಗವು ಕಾಲಕಾಲಕ್ಕೆ ನ್ಯಾಯಾಂಗದ ಹೊಣೆಗಾರಿಕೆಗೆ ವಿಶೇಷ ಒತ್ತು ನೀಡುತ್ತಾ ಬಂದಿದೆ. ಇದು ಸಂವಿಧಾನ ರಚನೆಕಾರರ ಆದರ್ಶಗಳನ್ನು ಸಾಕಾರಗೊಳಿಸಲು ಸಹಾಯ ಮಾಡಿದೆ ಎಂದು ಅವರು ಹೇಳಿದರು.

ದೇಶದ ಸಂಸ್ಥೆಗಳ ಕಾರ್ಯ ಸಂಸ್ಕೃತಿಯ ಪ್ರತಿಯೊಂದು ಆಯಾಮದಲ್ಲೂ 'ಭಾರತೀಯತೆ' ಪ್ರತಿಬಿಂಬಿತವಾಗಬೇಕು. ಕಳೆದ ಕೆಲವು ವರ್ಷಗಳಲ್ಲಿ, ನಮ್ಮ ಪರಂಪರೆಯ ಬಗ್ಗೆ ಹೆಮ್ಮೆ ಪಡುವ ಮತ್ತು ವಸಾಹತುಶಾಹಿ ಮನಸ್ಥಿತಿಯಿಂದ ಹೊರಬರುವ ಪ್ರಯತ್ನಗಳಿಗೆ ಗಮನಾರ್ಹ ವೇಗ ಸಿಕ್ಕಿದೆ. ಶಿಕ್ಷೆ ವಿಧಿಸುವ ಬದಲು ನ್ಯಾಯ ಒದಗಿಸುವ ತತ್ವಕ್ಕೆ ಅನುಗುಣವಾಗಿ, ಭಾರತೀಯ ನ್ಯಾಯಾಂಗವು ತ್ವರಿತ ನ್ಯಾಯವನ್ನು ಖಚಿತಪಡಿಸಿಕೊಳ್ಳುವ ಸಾಧನವಾಗಿ 'ಭಾರತೀಯ ನ್ಯಾಯ ಸಂಹಿತೆ'ಯ ಅನುಷ್ಠಾನವನ್ನು ಬಲಪಡಿಸುತ್ತಿದೆ ಎಂದು ರಾಷ್ಟ್ರಪತಿ ತಿಳಿಸಿದರು.

ಭಾರತೀಯ ಸಂವಿಧಾನವು ಕೇವಲ ಒಂದು ಕಾನೂನು ಚೌಕಟ್ಟಲ್ಲ, ಬದಲಾಗಿ ಅದು ರಾಷ್ಟ್ರದ ಜೀವಂತ ಚೈತನ್ಯವಾಗಿದೆ ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದ್ದಾರೆ.

ದೆಹಲಿಯಲ್ಲಿಂದು ನಡೆದ 'ಸಂವಿಧಾನ ದಿನ'ದ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ಸಂವಿಧಾನ ರಚನೆಕಾರರು ಸ್ವತಂತ್ರ ಭಾರತಕ್ಕೆ ಜನರ ಆಕಾಂಕ್ಷೆಗಳನ್ನು ಪ್ರತಿಬಿಂಬಿಸುವಂತಹ ಸಂವಿಧಾನವನ್ನು ನೀಡಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಪರಾಷ್ಟ್ರಪತಿಯವರು, ಭಾರತದ ಸಂವಿಧಾನವನ್ನು ಲನೇ ಅನುಸೂಚಿಯಲ್ಲಿ ಸೇರಿಸಲಾದ ಎಲ್ಲಾ ಭಾಷೆಗಳಲ್ಲಿ ಬಿಡುಗಡೆ ಮಾಡಿದರು. ೨೨ ಅಧಿಕೃತ ಭಾಷೆಗಳಲ್ಲಿ ಸಂವಿಧಾನವನ್ನು ಬಿಡುಗಡೆ ಮಾಡಿರುವುದು ಭಾರತದ ಭಾಷಾ ವೈವಿಧ್ಯತೆ, ಪ್ರಜಾಸತ್ತಾತ್ಮಕ ಒಳಗೊಳ್ಳುವಿಕೆ ಮತ್ತು ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿಹಿಡಿಯುತ್ತದೆ.. ಜಗತ್ತಿನ ಬೇರೆಲ್ಲೂ ಇಷ್ಟೊಂದು ವ್ಯಾಪಕ ಶ್ರೇಣಿಯ ಭಾಷೆಗಳಲ್ಲಿ ಸಂವಿಧಾನ ಲಭ್ಯವಿಲ್ಲ ಎಂದು ಅವರು ತಿಳಿಸಿದರು.

ಡಾ. ಅಂಬೇಡ್ಕರ್ ಅವರ ಅಸಾಧಾರಣ ಕೊಡುಗೆಯು ಭಾರತದ ಪ್ರಜಾಸತ್ತಾತ್ಮಕ ಪಯಣಕ್ಕೆ ಇಂದಿಗೂ ಮಾರ್ಗದರ್ಶನ ನೀಡುತ್ತಿದೆ. ಅವರ ದೂರದೃಷ್ಟಿ, ವಿವೇಕ ಮತ್ತು ಸಮರ್ಪಣಾ ಭಾವವು ಸ್ವತಂತ್ರ ಭಾರತಕ್ಕೆ ಜನರ ಆಕಾಂಕ್ಷೆಗಳನ್ನು ಪ್ರತಿಬಿಂಬಿಸುವ ಸಂವಿಧಾನವನ್ನು ಒದಗಿಸಿಕೊಟ್ಟಿತು ಎಂದು ಉಪರಾಷ್ಟ್ರಪತಿಯವರು ತಿಳಿಸಿದರು.

ಸಂವಿಧಾನ, ಕೇವಲ ಆಡಳಿತ ನಡೆಸಲು ಇರುವ ಕೈಪಿಡಿಯಲ್ಲ, ಬದಲಾಗಿ ಅದು ರಾಷ್ಟ್ರದ ಆಶೋತ್ತರಗಳು, ಆಕಾಂಕ್ಷೆಗಳು ಮತ್ತು ಮೌಲ್ಯಗಳನ್ನು ಪ್ರತಿಬಿಂಬಿಸುವ ದಾಖಲೆಯಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ದೆಹಲಿಯಲ್ಲಿ ಇಂದು ನಡೆದ 'ಸಂವಿಧಾನ ಗೌರವ ದಿವಸ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಂವಿಧಾನವನ್ನು ಗೌರವಿಸುವುದು ಎಲ್ಲಾ ಭಾರತೀಯರಿಗೆ ಅತ್ಯಂತ ಮಹತ್ವದ ಮತ್ತು ಹೆಮ್ಮೆಯ ಜವಾಬ್ದಾರಿಯಾಗಿದೆ. ಸ್ವಾತಂತ್ರ್ಯದ

ನಂತರ, ಸಂವಿಧಾನವನ್ನು ಕೇವಲ ಸರ್ಕಾರ ನಡೆಸುವ ಕೈಪಿಡಿಯನ್ನಾಗಿ ಮಾತ್ರ ಪರಿಗಣಿಸುವ ಪ್ರಯತ್ನ ನಡೆಯಿತು. ಮತ್ತು ದೇಶದ ಯುವಜನರು ಹಾಗೂ ನಾಗರಿಕರಲ್ಲಿ ಸಂವಿಧಾನದ ಆಶಯಗಳನ್ನು ಬಿತ್ತುವ ಹಾಗೂ ಅದನ್ನು ಬಲಪಡಿಸುವ ಪ್ರಕ್ರಿಯೆಯನ್ನು ಮರೆತುಬಿಡಲಾಯಿತು ಎಂಬುದು ದುರದೃಷ್ಟಕರ ಸಂಗತಿ ಎಂದು ಅವರು ಹೇಳಿದರು.

ಸಂವಿಧಾನದ ಅತ್ಯುನ್ನತ ಮೌಲ್ಯಗಳನ್ನು ಪ್ರತಿಯೊಂದು ಶಾಲೆ, ಕಾಲೇಜು ಮತ್ತು ಎಲ್ಲಾ ನಾಗರಿಕರಿಗೆ ತಲುಪಿಸುವ ಉದ್ದೇಶದಿಂದ, ಪ್ರತಿ ವರ್ಷ ನವೆಂಬರ್ ೨೬ ಅನ್ನು 'ಸಂವಿಧಾನ ದಿನ'ವನ್ನಾಗಿ ಆಚರಿಸಲು ಪ್ರಧಾನಿ ನರೇಂದ್ರ ಮೋದಿ ಅವರು ೨೦೧೫ರಲ್ಲಿ ನಿರ್ಧರಿಸಿದರು ಎಂದು ಸಚಿವರು ತಿಳಿಸಿದರು.

ಭಾರತ, ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ ಮತ್ತು ಜಾಗತಿಕ ಮಟ್ಟದ ಪ್ರಮುಖ ಶಕ್ತಿಯಾಗಿ ಹೊರಹೊಮ್ಮಬೇಕೆಂಬ ಆಕಾಂಕ್ಷೆಯು, ಬಲವಾದ, ಸ್ಥಿತಿಸ್ಥಾಪಕತ್ವವುಳ್ಳ ಮತ್ತು ತಾಂತ್ರಿಕವಾಗಿ ಮುಂದುವರಿದ ರಾಷ್ಟ್ರೀಯ ಭದ್ರತಾ ವ್ಯವಸ್ಥೆಯ ಮೇಲೆ ಆಧಾರಿತವಾಗಿರಬೇಕು ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.

ದೆಹಲಿಯಲ್ಲಿಂದು ನಡೆದ ೬೬ನೇ ರಾಷ್ಟ್ರೀಯ ರಕ್ಷಣಾ ಕಾಲೇಜು ಕೋರ್ಸ್‌ನ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಒಂದು ರಾಷ್ಟ್ರದ ಶಕ್ತಿಯು ಕೇವಲ ಅದರ ಸೇನಾ ಸಾಮರ್ಥ್ಯಗಳು ಅಥವಾ ಆರ್ಥಿಕ ಸಂಪನ್ಮೂಲಗಳಲ್ಲಿ ಮಾತ್ರವಲ್ಲದೆ, ಅದರ ಸಂಸ್ಥೆಗಳ ಗುಣಮಟ್ಟ, ನಾಯಕತ್ವದ ದೂರದೃಷ್ಟಿ ಮತ್ತು ಬದಲಾಗುತ್ತಿರುವ ಜಗತ್ತಿಗೆ ಹೊಂದಿಕೊಳ್ಳುವ ಸಾಮರ್ಥ್ಯದಲ್ಲಿಯೂ ಅಡಗಿದೆ ಎಂದು ಹೇಳಿದರು.

ಜಾಗತಿಕ ಅಧಿಕಾರ ಸಮತೋಲನವು ಬದಲಾಗುತ್ತಿದೆ, ಹೊಸ ಕಾರ್ಯತಂತ್ರದ ಪ್ರಭಾವ ಕೇಂದ್ರಗಳು ಉದಯಿಸುತ್ತಿವೆ ಮತ್ತು ಸಾಂಪ್ರದಾಯಿಕ ಮೈತ್ರಿಗಳು ಹಾಗೂ ಪಾಲುದಾರಿಕೆಗಳು ಮರುಹೊಂದಾಣಿಕೆಗೆ ಒಳಗಾಗುತ್ತಿವೆ. ಭಾರತದ ಭೌಗೋಳಿಕ ಸ್ಥಾನ, ವಿಸ್ತೃತ ಗಡಿಗಳು, ಕಡಲ ಹಿತಾಸಕ್ತಿಗಳು ಮತ್ತು ಹೆಚ್ಚುತ್ತಿರುವ ಅಂತಾರಾಷ್ಟ್ರೀಯ ಜವಾಬ್ದಾರಿಗಳನ್ನು ಪರಿಗಣಿಸಿದರೆ, ಈ ಬೆಳವಣಿಗೆಗಳು ಭಾರತಕ್ಕೆ ಅತ್ಯಂತ ಮಹತ್ವದ್ದಾಗಿವೆ ಎಂದು ಸಚಿವರು ಒತ್ತಿ ಹೇಳಿದರು.

೨೦೨೫-೨೬ನೇ ಸಾಲಿನಲ್ಲಿ ಭಾರತ, ೩೭೮ ದಶಲಕ್ಷ ಟನ್‌ಗೂ ಅಧಿಕ ಆಹಾರ ಧಾನ್ಯವನ್ನು ಉತ್ಪಾದಿಸುವ ಮೂಲಕ ಐತಿಹಾಸಿಕ ಸಾಧನೆ ಮಾಡಿದೆ ಎಂದು ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ತಿಳಿಸಿದ್ದಾರೆ.

ದೆಹಲಿಯಲ್ಲಿಂದು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಹಿಂದಿನ ವರ್ಷಕ್ಕೆ ಹೋಲಿಸಿದರೆ ೨೦೨೫-೨೬ರಲ್ಲಿ ೨೦೮ ಲಕ್ಷ ಟನ್‌ಗಳಷ್ಟು ಕೃಷಿ ಉತ್ಪಾದನೆ ಹೆಚ್ಚಳವಾಗಿದೆ. ಭಾರತ, ಸತತ ಎರಡನೇ ವರ್ಷವೂ ವಿಶ್ವದ ಅತಿದೊಡ್ಡ ಅಕ್ಕಿ ಉತ್ಪಾದಕ ರಾಷ್ಟ್ರವಾಗಿ ತನ್ನ ಸ್ಥಾನವನ್ನು ಕಾಯ್ದುಕೊಂಡಿದೆ. ಒಟ್ಟು ಅಕ್ಕಿ ಉತ್ಪಾದನೆ, ೧೫೫ ದಶಲಕ್ಷ ಟನ್ ದಾಟಿದ್ದು, ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ ೪೯.೭೦ ಲಕ್ಷ ಟನ್‌ಗೂ ಹೆಚ್ಚು ಹೆಚ್ಚಳವಾಗಿದೆ ಎಂದು ಹೇಳಿದರು.

ಗೋಧಿ ಉತ್ಪಾದನೆಯ ಕುರಿತು ಮಾತನಾಡಿದ ಸಚಿವರು, ಭಾರತ, ಸುಮಾರು ೧೭೨ ದಶಲಕ್ಷ ಟನ್‌ಗಳ ದಾಖಲೆಯ ಇಳುವರಿಯೊಂದಿಗೆ ಜಾಗತಿಕವಾಗಿ ಎರಡನೇ ಸ್ಥಾನವನ್ನು ಉಳಿಸಿಕೊಂಡಿದೆ. ಅಲ್ಲದೆ, ಬೇಳೆಕಾಳುಗಳ ಉತ್ಪಾದನೆಯು ಕಳೆದ ವರ್ಷದ ಸುಮಾರು ೨೫೬ ಲಕ್ಷ ಟನ್‌ಗಳಿಂದ ಈ ಬಾರಿ ಸುಮಾರು ೨೭೨ ಲಕ್ಷ ಟನ್‌ಗಳಿಗೆ ಏರಿಕೆಯಾಗಿದೆ.

೨೦೨೬-೨೭ನೇ ಸಾಲಿನ ಖಾರಿಫ್ ಹಂಗಾಮಿನ ಮೊದಲ ಮುಂಗಡ ಅಂದಾಜುಗಳನ್ನು ಬಿಡುಗಡೆ ಮಾಡಿದ ಸಚಿವರು, ಮಹಾರಾಷ್ಟ್ರ, ಕರ್ನಾಟಕ, ತೆಲಂಗಾಣ ಮತ್ತು ಆಂಧ್ರಪ್ರದೇಶದಂತಹ ರಾಜ್ಯಗಳಲ್ಲಿ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳು, ಮುಂಗಾರು ಮಳೆಯ ವಿಳಂಬ ಮತ್ತು ಮಣ್ಣಿನಲ್ಲಿ ತೇವಾಂಶದ ಕೊರತೆಯಿದ್ದರೂ, ಈ ಬಾರಿಯ ಮುಂಗಾರು ಆಹಾರ ಧಾನ್ಯ ಉತ್ಪಾದನೆಯು ಕಳೆದ ಐದು ವರ್ಷಗಳ ಸರಾಸರಿಗಿಂತ ೯೭.೯೭ ಲಕ್ಷ ಟನ್‌ಗಳಷ್ಟು ಹೆಚ್ಚಾಗುವ ನಿರೀಕ್ಷೆಯಿದೆ ಎಂದು ಹೇಳಿದರು.

ಗೋವಾದಲ್ಲಿ ನಡೆಯುತ್ತಿರುವ ೫೭ನೇ ಭಾರತೀಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಭಾರತೀಯ ಸೃಜನಶೀಲ ತಂತ್ರಜ್ಞಾನ ಸಂಸ್ಥೆ-ಐಐಸಿಟಿ ತನ್ನ ವಿಶೇಷ ಮಳಿಗೆಯ ಮೂಲಕ ಗಮನ ಸೆಳೆಯುತ್ತಿದೆ.

ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದಡಿ ಸ್ಥಾಪಿತವಾಗಿರುವ ಈ ಸಂಸ್ಥೆ, ಅನಿಮೇಷನ್, ವಿಷುಯಲ್ ಎಫೆಕ್ಟ್ಸ್, ಗೇಮಿಂಗ್ ಸೇರಿದಂತೆ ಸೃಜನಶೀಲ ತಂತ್ರಜ್ಞಾನ ಕ್ಷೇತ್ರಗಳಲ್ಲಿನ ಉದ್ಯೋಗಾವಕಾಶ, ಶೈಕ್ಷಣಿಕ ಕಾರ್ಯಕ್ರಮ ಹಾಗೂ ಕೌಶಲ್ಯಾಭಿವೃದ್ಧಿ ಚಟುವಟಿಕೆಗಳನ್ನು ಪರಿಚಯಿಸುತ್ತಿದೆ.

ಇದೇ ವೇಳೆ, 'ಡೂಡಲ್ ಡ್ಯಾಶ್: ದಿ ಮೂವಿ ಪೋಸ್ಟರ್ ಚಾಲೆಂಜ್' ಎಂಬ ಸೃಜನಶೀಲ ಸ್ಪರ್ಧೆಯನ್ನು ಆಯೋಜಿಸಿದ್ದು, ಒಂದು ಲಕ್ಷ ರೂಪಾಯಿಗೂ ಅಧಿಕ ಮೌಲ್ಯದ ಬಹುಮಾನಗಳ ಜೊತೆಗೆ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಶೇಕಡ ೩೦ರಷ್ಟು ವಿದ್ಯಾರ್ಥಿವೇತನ ನೀಡಲಾಗುತ್ತಿದೆ.

ದೇಶದ ಸೃಜನಶೀಲ ತಂತ್ರಜ್ಞಾನ ಕ್ಷೇತ್ರಕ್ಕೆ ಕೌಶಲ್ಯಪೂರ್ಣ ಮಾನವ ಸಂಪನ್ಮೂಲ ರೂಪಿಸುವುದು ಸಂಸ್ಥೆಯ ಉದ್ದೇಶವಾಗಿದೆ.

ಗೋವಾದಲ್ಲಿ ನಡೆಯುತ್ತಿರುವ ೫೭ನೇ ಭಾರತೀಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಅಂಗವಾಗಿ, ಪಣಜಿಯ ಕಲಾ ಅಕಾಡೆಮಿಯಲ್ಲಿ ಇಂದು 'ಆಸ್ಕರ್ ಪ್ರಶಸ್ತಿಗಳ ಒಳನೋಟ' ವಿಷಯದ ಕುರಿತು ವಿಶೇಷ ಮಾಸ್ಟರ್‌ಕ್ಲಾಸ್ ಆಯೋಜಿಸಲಾಗಿತ್ತು.

ಅಕಾಡೆಮಿ ಆಫ್ ಮೋಷನ್ ಪಿಕ್ಚರ್ ಆರ್ಟ್ಸ್ ಅಂಡ್ ಸೈನ್ಸಸ್‌ನ ಸದಸ್ಯರ ಸಂಬಂಧ ಮತ್ತು ಪ್ರಶಸ್ತಿ ಆಡಳಿತ ವಿಭಾಗದ ಉಪಾಧ್ಯಕ್ಷೆ ನಟಾಲಿ ವೇಡ್ ಅವರು, ಆಸ್ಕರ್ ಪ್ರಶಸ್ತಿಗಳ ಅರ್ಹತಾ ಮಾನದಂಡಗಳು, ಚಿತ್ರಗಳ ನಾಮನಿರ್ದೇಶನ ಪ್ರಕ್ರಿಯೆ, ಮತದಾನ ವ್ಯವಸ್ಥೆ ಹಾಗೂ ಪ್ರಶಸ್ತಿ ಆಯ್ಕೆಯ ಕುರಿತು ಮಾಹಿತಿ ನೀಡಿದರು.

ಅತ್ಯುತ್ತಮ ಚಿತ್ರ, ಕಿರುಚಿತ್ರ ಮತ್ತು ಅಂತಾರಾಷ್ಟ್ರೀಯ ಚಲನಚಿತ್ರ ವಿಭಾಗಗಳ ಆಯ್ಕೆ ಪ್ರಕ್ರಿಯೆ ಸೇರಿದಂತೆ ಚಲನಚಿತ್ರ ತಂತ್ರಜ್ಞಾನ ಮತ್ತು ನಾವೀನ್ಯತೆಗೆ ನೀಡಲಾಗುವ ವೈಜ್ಞಾನಿಕ ಹಾಗೂ ತಾಂತ್ರಿಕ ಪ್ರಶಸ್ತಿಗಳ ಬಗ್ಗೆಯೂ ಅವರು ವಿವರಿಸಿದರು. ಜಾಗತಿಕ ಚಲನಚಿತ್ರ ಕ್ಷೇತ್ರದ ತಜ್ಞರಿಂದ ಕಲಿಯಲು ಚಿತ್ರ ನಿರ್ಮಾಪಕರು, ವಿದ್ಯಾರ್ಥಿಗಳು ಮತ್ತು ಸಿನಿಮಾ ಆಸಕ್ತರಿಗೆ ಈ ಮಾಸ್ಟರ್‌ಕ್ಲಾಸ್ ಅವಕಾಶ ಕಲ್ಪಿಸಿತು.

ಕತಾರ್‌ನ ದೋಹಾದಲ್ಲಿ ನಡೆಯುತ್ತಿರುವ ಪುರುಷರ ಏಷ್ಯಾಕಪ್ ರೈಸಿಂಗ್ ಸ್ಟಾರ್ಸ್ ೨೦೨೬ ಕ್ರಿಕೆಟ್ ಪಂದ್ಯಾವಳಿಯ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಭಾರತ ಎ ತಂಡ, ಶ್ರೀಲಂಕಾ ಎ ತಂಡಕ್ಕೆ ಗೆಲ್ಲಲು ೩೧೮ ರನ್‌ಗಳ ಗುರಿ ಒಡ್ಡಿದೆ.

ಟಾಸ್ ಗೆದ್ದ ಭಾರತ, ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡು ನಿಗದಿತ ೫೦ ಓವರ್‌ಗಳಲ್ಲಿ ೮ ವಿಕೆಟ್ ನಷ್ಟಕ್ಕೆ ೩೧೭ ರನ್ ಮಾಡಿತು.

ಭಾರತದ ಪರವಾಗಿ ಅಭಿಷೇಕ್ ಶರ್ಮಾ ೭೮, ಶಹಬಾಜ್ ಅಹಮದ್ ೫೪, ತಿಲಕ್ ವರ್ಮಾ ೫೩ ರನ್ ಗಳಿಸಿದರು.

_____ ಮುಕ್ತಾಯ _____